**P.C. No.**157/2026

**PW**: 01

ಸಾಕ್ಷಿದಾರರನ್ನು ದಿನಾಂಕಃ 05-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಿರ್ಯಾದಿದಾರರ ಪ್ರಮಾಣ ಪೂರ್ವಕ ಹೇಳಿಕೆ ಮಾನ್ಯ ನ್ಯಾಯಾಲಯದಿಂದ.**

ನನ್ನ ಪ್ರಮಾಣ ಪೂರ್ವಕ ಹೇಳಿಕೆಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ನಿಜವಿರುತ್ತದೆ. ಅದಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿರುವ ಸಹಿ ನನ್ನದು.

ನಾನು ನ್ಯಾಯಾಲಯದಲ್ಲಿ ಹಾಜರು ಪಡಿಸಿದ ಚಕ್‌ನ್ನು ನಿಪಿ.1 ಎಂದು, ನಿಪಿ.1 ರಲ್ಲಿ ಆರೋಪಿತನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.1(ಎ) ಎಂದು, ಬ್ಯಾಂಕ ಹಿಂಬರಹ ನಿಪಿ.2, ಕಾನೂನು ಬದ್ಧ ನೊಟೀಸಿನ ಕಚೇರಿಯ ಪ್ರತಿ ನಿಪಿ.3, ಅಂಚೆ ರಸೀದಿ ನಿಪಿ.4, ಮುಚ್ಚಿ ದ ಅಂಚೇ ಲಕೋಟೆ ನಿಪಿ.5 ಎಂದು, Resolution ನ್ನು ನಿಪಿ.6 ಎಂದು ಗುರುತಿಸಲಾಯಿತು. ನಾನು ಅರ್ಜಿಯಲ್ಲಿ ಕೋರಿದಂತೆ ಆರೋಪಿಯ ಮೇಲೆ ಸೂಕ್ತ ಕ್ರಮ ತಗೆದುಕೊಳ್ಳಬೇಕೆಂದು ಕೋರಿಕೊಳ್ಳುತ್ತೇನೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಖಾನಾಪೂರ.**